ಹೆಚ್ಚುವರಿ ಅಂಕಗಳನ್ನು ನೀಡಿ weightage marks ಅನ್ನು ನೀಡಿ ಖಾಯಂ ಮಾಡುವ ಬಗ್ಗೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು:– O.K. ಮಾನ್ಯ ಕೆ.ಜಿ. ಬೋಪಯ್ಯನವರೆ ತಾವು ಕೇಳಿ.

2) ವಿಷಯ: ಏಲಕ್ಕಿ ಮಲೆಯ ಜಾಗವನ್ನು ಅರಣ್ಯ ಇಲಾಖೆಗೆ ಬಿಟ್ಟು ಕೊಡುವ ಹಾಗೂ ಪರಿಹಾರವನ್ನು ಕೊಡುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕುಂಜಿಲ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಾದ ನಾಲಡಿ, ಯಮಕಪಾಡಿ, ಪಾಲಂಗಾಲ ಗ್ರಾಮಗಳ ವ್ಯಾಪ್ತಿಯಲ್ಲಿನ ಏಲಕ್ಕಿ ಮಲೆಯ ಜಾಗವನ್ನು ಅರಣ್ಯ ಇಲಾಖೆಯ ವಶಕ್ಕೆ ಬಿಟ್ಟು ಕೊಡುವ ಹಾಗೂ ಇದಕ್ಕೆ ಪರಿಹಾರ ಕೋರಿರುವ ಬಗ್ಗೆ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):– ಮಾನ್ಯ ಅಧ್ಯಕ್ಷರೆ,

1. ಕೊಡಗು ಜಿಲ್ಲೆಯಲ್ಲಿನ ಜಮ್ಮಾ ಮಲೈ ಜಮೀನುಗಳು ಅರಣ್ಯ ಕಾಯ್ದೆಯಡಿಯಲ್ಲಿ ಶಾಸನ ಬದ್ಧವಾಗಿ ಕಾಯ್ದಿಟ್ಟ ಅರಣ್ಯವೆಂದು ತೀರ್ಮಾನಗೊಂಡಿರುವ ಅರಣ್ಯ ಭೂಮಿಗಳಾಗಿರುತ್ತವೆ.

2. ಜಮ್ಮಾ ಮಲೈಗಳ ಪ್ರದೇಶವು ಅಯ್ಯಂಗೇರಿ, ನಾಲಾಡಿ, ಯೆವಕಪಾಡಿ, ಬೇಲಾವರ, ಕರಡ (ಮಡಿಕೇರಿ ತಾಲ್ಲೂಕು) ಮತ್ತು ಪಾಲಂಗಳ (ವಿರಾಜಪೇಟೆ) ಹಳ್ಳಿಗಳಲ್ಲಿ ಇರುತ್ತವೆ.

3. ಜಮ್ಮಾ ಮಲೈಗಳಲ್ಲಿ ಅರಣ್ಯ ಉತ್ಪನ್ನವಾದ ಏಲಕ್ಕಿಯನ್ನು ಮಾತ್ರ ಸಂಗ್ರಹಿಸುವ ನಿಯಮಿತ ಹಕ್ಕಿರುವ ಜನರನ್ನು ಜಮ್ಮಾ ಮಲೈಗಾರರು

ಎಂದು ಕರೆಯಲಾಗುತ್ತದೆ. ಅವರು ಮಲೈಗಳಲ್ಲಿ ಏಲಕ್ಕಿ ಬೆಳೆಯನ್ನು ಮಾತ್ರ ಬೆಳೆಯಬಹುದು. ಅವರು ಕಾಡಿನಿಂದ ಏಲಕ್ಕಿಯನ್ನಲ್ಲದೇ ಬೇರೇನನ್ನೂ ಹೊರತರುವಂತಿಲ್ಲ. ಏಲಕ್ಕಿಯನ್ನು ಬೆಳೆಯುವ ಹಕ್ಕು ವೈಯಕ್ತಿಕ ಹಕ್ಕಾಗಿದ್ದು ಅದನ್ನು ಹಸ್ತಾಂತರಿಸುವುದಾಗಲಿ ಅಥವಾ ಉಪ ಭೋಗಕ್ಕಾಗಲಿ ನೀಡಲು ಸಾಧ್ಯವಿಲ್ಲ.

4. ಜಮ್ಮಾ ಮಲೈಗಾರರು ಜಮ್ಮಾ ಮಲೈಗಳ ಮೇಲೆ ಯಾವುದೇ ಮಾಲೀಕತ್ವದ ಹಕ್ಕನ್ನು ಹೊಂದಿಲ್ಲ. ಅವರಿಗೆ ಭೂಮಿ ಅಥವಾ ಅಲ್ಲಿರುವ ಮರಗಳ ಮೇಲಾಗಲಿ ಯಾವುದೇ ಹಕ್ಕು ಇರುವುದಿಲ್ಲ. ಅವರು ಮಲೈಗಳನ್ನು ಮಾರಾಟ, ಪರಭಾರೆ, ಹಸ್ತಾಂತರ, ಬೋಗ್ಯ ಅಥವಾ ಉಪ ಬೋಗ್ಯ ಮಾಡುವಂತಿಲ್ಲ. ಅವರ ಕುಟುಂಬ ಸದಸ್ಯರೊಂದಿಗೂ ಜಮ್ಮಾ ಮಲೈಗಳನ್ನು ವಿಭಜಿಸಲು ಕೂಡ ಸಾಧ್ಯವಿಲ್ಲ.

5. ಕೊಡಗು ಜಿಲ್ಲೆಯ ಜಮ್ಮಾ ಮಲೈ ಭೂಮಿಯನ್ನು ಜಮ್ಮಾ ಮಲೈದಾರರಿಂದ ಅರಣ್ಯ ಇಲಾಖೆಯ ವಶಕ್ಕೆ ಪಡೆಯುವ ವಿಷಯವಾಗಿ ಸರ್ಕಾರವು ಪರಿಶೀಲಿಸುತ್ತಿದ್ದು, ಇತ್ತೀಚಿಗೆ ಕೊಡಗು ಜಮ್ಮಾ ಮಲೈ ಬಗ್ಗೆ National Archives of India, New Delhi ರವರಿಂದ ಜಮ್ಮಾ ಮಲೈ ಕುರಿತು 1906 ರಲ್ಲಿ ಹೊರಡಿಸಿರುವ ಅಂತಿಮ Settelment ಆದೇಶ ಪಡೆಯಲಾಗಿದ್ದು, ಈ Settelment ಆದೇಶದನ್ವಯ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 36030/2003 ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದು ಮತ್ತು ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಇಲ್ಲಿಯವರೆಗೆ ಹೊರಡಿಸಿರುವ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಜಮ್ಮಾ ಮಲೈದಾರರುಗಳ Cardmom ಗೇಣಿ ಹಕ್ಕನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಕ್ರಮ ವಹಿಸಲಾಗುವುದು.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಮಡಿಕೇರಿ ತಾಲ್ಲೂಕು ವಿರಾಜಪೇಟೆ ತಾಲ್ಲೂಕಿನಲ್ಲಿ ಸುಮಾರು 8440 ಎಕರೆಯಷ್ಟು ಜಮ್ಮಾ ಮಲೆ ಅಂದರೆ ಏಲಕ್ಕಿ ಬೆಳೆಯುವಂತಹ forest land ಇದೆ. ಅದು ಅವರ ಸ್ವಾಧೀನದಲ್ಲಿದೆ. ಅವರು ಕಂದಾಯವನ್ನು ಸಹ ಕಟ್ಟುತ್ತಿದ್ದಾರೆ. ಆ ಕೃಷಿ ಮಾಡುವಂತಹ ಜಾಗವನ್ನು ಸರ್ಕಾರಕ್ಕೆ ಬಿಟ್ಟುಕೊಡುತ್ತಾರೆ. ಅದಕ್ಕೆ ಒಂದಿಷ್ಟು ಪರಿಹಾರವನ್ನು ಕೊಡಿ ಎಂದು ಬಹಳ ವರ್ಷದಿಂದ ಇದು ನಡೆಯುತ್ತಿದೆ. ಹಿಂದೆ ಈ ಸಂಬಂಧ ನನ್ನ ಅಧ್ಯಕ್ಷತೆಯಲ್ಲಿ 2–3 ಸಭೆಗಳು ಸಹ ನಡೆದಿತ್ತು.

ಅಧ್ಯಕ್ಷರು:– ತಾವು ಏನಾಗಬೇಕೆಂದು ಕೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅವರು ಸರ್ಕಾರಕ್ಕೆ ಆ ಜಾಗವನ್ನು ಬಿಟ್ಟುಕೊಡುತ್ತಿದ್ದಾರೆ. ಕಾವೇರಿ ನದಿ ಹುಟ್ಟುವಂತಹ ಜಾಗದಲ್ಲಿ ಅದು ಇದೆ.

ಅಧ್ಯಕ್ಷರು:– ಅವರು ಆ ಜಾಗವನ್ನು ಸರ್ಕಾರಕ್ಕೆ ಬಿಟ್ಟುಕೊಡುತ್ತಾರೆಯೇ?

ಶ್ರೀ ಕೆ.ಜಿ. ಬೋಪಯ್ಯ:– ಸರ್ಕಾರಕ್ಕೆ ಅವರು ಆ ಜಾಗವನ್ನು ವಾಪಸ್ಸು ಬಿಟ್ಟುಕೊಡುತ್ತಿದ್ದಾರೆ.

ಅಧ್ಯಕ್ಷರು:– ಆ ಜಾಗವನ್ನು ಕೊಡಲಿ ಬೇಡ ಅಂದವರು ಯಾರು?

ಶ್ರೀ ಕೆ.ಜಿ. ಬೋಪಯ್ಯ:– ಅದಕ್ಕೆ ಒಂದಿಷ್ಟು ಪರಿಹಾರವನ್ನು ಕೊಡಿ ಎಂದರೆ ...

ಅಧ್ಯಕ್ಷರು:– ಸರ್ಕಾರದ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡುವುದಕ್ಕೆ ಪರಿಹಾರ ಕೊಡಬೇಕೇ?

ಶ್ರೀ ಕೆ.ಜಿ. ಬೋಪಯ್ಯ:– ನಮಗೆ ಆ ಜಮೀನಿನಲ್ಲಿ ಏಲಕ್ಕಿ ಬೆಳೆಯುವುದಕ್ಕೆ ಹಕ್ಕು ಇದೆಯಲ್ಲಾ?

ಅಧ್ಯಕ್ಷರು:– ಏನು ಹಕ್ಕು ಇದೆ?

ಶ್ರೀ ಕೆ.ಜಿ. ಬೋಪಯ್ಯ:– ಅದನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ ತಾವು ಹೇಳಿ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀ ಬೋಪಯ್ಯನವರು ಹಿರಿಯ ಸದಸ್ಯರಾಗಿದ್ದು ಅವರಿಗೆ ಎಲ್ಲವೂ ಗೊತ್ತಿದೆ. ಈ ಜಮ್ಮಾಮಲೈಯ ವಿಚಾರ ಸಾಕಷ್ಟು ದಿವಸದಿಂದ ನೆನಗುದಿಗೆ ಬಿದ್ದಿದ್ದು ಅದರಿಂದ ಸಮಸ್ಯೆಯಾಗಿದೆ. ಅವರು ಅನೇಕ ಮೀಟಿಂಗ್‌ಗಳನ್ನು ಮಾಡಿದ್ದೇವೆಂದು ಏನು ಇದುವರೆಗೂ ಪರಿಹಾರವಾಗಿಲ್ಲವೆಂದು ಹೇಳಿದ್ದಾರೆ. ಅವರು ಕೇಳಿರುವುದಕ್ಕೆ ನಾನು ಸದ್ಯಕ್ಕೆ ಉತ್ತರವನ್ನು ಕೊಡುತ್ತಿದ್ದೇನೆ. ಕೊಡಗು ಜಿಲ್ಲೆಯಲ್ಲಿ ಜಮ್ಮಾ ಮಲೈ ಜಮೀನುಗಳು ಅರಣ್ಯ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ಕಾಯ್ದಿಟ್ಟ ಅರಣ್ಯವೆಂದು ತೀರ್ಮಾನಗೊಂಡಿರುವ ಅರಣ್ಯ ಭೂಮಿಗಳಾಗಿರುತ್ತವೆ.

ಅಧ್ಯಕ್ಷರು:– ತಮ್ಮ ಹತ್ತಿರ ಕಾಪಿ ಇದ್ದರೆ ಅವರಿಗೆ ಕೊಡಿ.

ಶ್ರೀ ಕೆ.ಜಿ. ಬೋಪಯ್ಯ:– ನಾನು ಏನು clarification ಕೇಳುವುದೇನೆಂದರೆ, 8,840 ಎಕರೆ thick forest ಇದೆ. ಬಹುಶಃ ಇವರು 100 ವರ್ಷಗಳಾದರೆ ಅಲ್ಲಿ ಮರಗಳನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ಅಲ್ಲಿ procedure ಹೇಗಿದೆ ಎಂದರೆ, ಅರ್ಧ ಎಕರೆ ಏಲಕ್ಕಿಯನ್ನು ನೆಟ್ಟರೆ ಅರ್ಧ ಎಕರೆ ಕಾಡನ್ನು ಬಿಡಬೇಕು. ಇಲ್ಲದೆ ಇದ್ದರೆ ಏಲಕ್ಕಿ ಬರುವುದಿಲ್ಲ. ನಮ್ಮದು ಏಲಕ್ಕಿ ಬೆಳೆಯುವ ಹಕ್ಕು ಏನಿದೆ, ಅದನ್ನು ನಾವು ವಾಪಸ್ಸು ತೆಗೆದುಕೊಂಡು ಅದನ್ನು ನೀವೇ ಅರಣ್ಯವಾಗಿ ಉಳಿಸಿಕೊಳ್ಳಿ ಈಗ ನಾವು ಹಕ್ಕನ್ನು ಬಿಟ್ಟುಕೊಡುತ್ತಿದ್ದೇವೆ. ಅದಕ್ಕೆ ಒಂದಿಷ್ಟು ಪರಿಹಾರವನ್ನು ಕೊಟ್ಟುಬಿಟ್ಟರೆ ಸಾಕು.

ಅಧ್ಯಕ್ಷರು:– ಉತ್ತರದಲ್ಲಿ ಏನು ಹೇಳಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಅದು ಸರ್ಕಾರದ ಜಾಗ, ಅದನ್ನು ಮಾರಾಟ ಮಾಡುವ ಹಾಗಿಲ್ಲ, ನಾವು ಆ ಜಾಗದಲ್ಲಿ ಇರುವ ಮರವನ್ನು ಸಹ ಮಾರುವ ಹಾಗಿಲ್ಲ. ಅವರು ನಮಗೆ ಪರಿಹಾರವನ್ನು ಕೊಡುವುದಷ್ಟೆ ನಮ್ಮ ಬೇಡಿಕೆ ಇದೆ.

ಅಧ್ಯಕ್ಷರು:– ಆಯಿತು.

ಶ್ರೀ ಕೆ.ಜಿ. ಬೋಪಯ್ಯ:– ನಾವು minimum ಮಾತ್ರ ಕೇಳಿದ್ದೇವೆ. Market rate ಏನು ಕೇಳುತ್ತಾಯಿಲ್ಲ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ಕೊಡಗು ಜಿಲ್ಲೆ ಜಮ್ಮಾ ಮಲೈ ಭೂಮಿಯನ್ನು ಜಮ್ಮಾ ಮಲೈದಾರರಿಂದ ಅರಣ್ಯ ಇಲಾಖೆಯ ವಶಕ್ಕೆ ಪಡೆಯುವ ವಿಷಯವಾಗಿ ಸರ್ಕಾರವು ಪರಿಶೀಲಿಸುತ್ತಿದ್ದು ಇತ್ತೀಚೆಗೆ ಕೊಡಗು ಜಮ್ಮಾ ಮಲೈ ಬಗ್ಗೆ National Archives of India, New Delhi ರವರಿಂದ ಜಮ್ಮಾ ಮಲೈ ಕುರಿತು 1906ರಲ್ಲಿ ಹೊರಡಿಸಿರುವ ಅಂತಿಮ settlement ಆದೇಶ ಪಡೆಯಲಾಗಿದ್ದು... ಈ settlement ಆದೇಶದನ್ವಯ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 36030/2003 ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದು ಮತ್ತು ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯ ಇಲ್ಲಿಯವರೆಗೆ ಹೊರಡಿಸಿರುವ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಜಮ್ಮಾ ಮಾಲೀಕರ ಗೇಣಿ ಹಕ್ಕನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳುವುದೆಂದು ಉತ್ತರವನ್ನು ಕೊಟ್ಟಿದ್ದೇವೆ. ಈಗ ತಾವೇನು 8 ಸಾವಿರ ಹೆಕ್ಟೇರ್ ಜಮೀನಿದೆ ಎಂದು ಹೇಳುತ್ತೀರಿ. ಆದರೆ ಈ settlement ಆದಾಗ ಏನಾಗಿದೆ ಎಂದರೆ ಅದರಲ್ಲಿ ಒಟ್ಟು ಮಲೆನಾಡು ಪ್ರದೇಶ 11,756 ಎಕರೆ ಇದೆ.

ಅಧ್ಯಕ್ಷರು:– ಈಗ simple ಪ್ರಶ್ನೆ ಇದೆ. ದುಡ್ಡು ಕೊಡಿ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ನಿಮ್ಮಿಂದ ಆಗುತ್ತದೋ ಇಲ್ಲವೋ ಅಷ್ಟೇ ಹೇಳಿ..

ಶ್ರೀ ಬಿ. ರಮಾನಾಥ ರೈ:– ಸಾಗುವಳಿಗೆ ಯೋಗ್ಯವಾಗಿರುವ ಪ್ರದೇಶ 6,647 ಎಕರೆ ಸಾಗುವಳಿಗೆ ಯೋಗ್ಯವಲ್ಲದ ಪ್ರದೇಶ 5,109 ಎಕರೆ. ಸಾಗುವಳಿಗೆ ಯೋಗ್ಯವಾಗಿರುವ ಪ್ರದೇಶದ ಪೈಕಿ ಸಾಗುವಳಿ ಮಾಡುವ ವಿಸ್ತೀರ್ಣ 394 ಎಕರೆ ಎಂದು settlement ಆಗಿ ಒಂದು ತೀರ್ಮಾನವಾಗಿರುತ್ತದೆ. ಆದ್ದರಿಂದ ಈ ಪ್ರದೇಶ ತಾವೇನು 8 ಸಾವಿರ ಎಕರೆ

ಎಂದು ಹೇಳುತ್ತೀರಿ, ಇವರು ಸಾಗುವಳಿ ಆಗುವ ಪ್ರದೇಶದ ಪೈಕಿ ಕೋರ್ಟಿನ ಆದೇಶ ಇದೆ. ಇಷ್ಟು ವರ್ಷದವರೆಗೆ ಇದು ನೆನೆಗುದಿಗೆ ಬಿದ್ದಿರುವ ವಿಚಾರ. ಜಮ್ಮಾ ಮೇಲೆ ತೊಂದರೆ ಪಟ್ಟಿರುವ ಬಹಳಷ್ಟು ಜನ ನಮ್ಮನ್ನು ಭೇಟಿ ಮಾಡಿದ್ದಾರೆ. ಇದು ದೊಡ್ಡ ವಿಚಾರವಾಗಿದೆ. ನಾವು ಅವರೊಂದಿಗೆ ಮಾತುಕತೆ ಮಾಡಿದ್ದೇವೆ. ಇನ್ನೊಮ್ಮೆ ಅವರೊಂದಿಗೆ ಮಾತುಕತೆ ಮಾಡಿ settlement ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಈಗ ಇರತಕ್ಕಂಥ ವಾಸ್ತವಿಕ ಸ್ಥಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು:– ಆಯಿತು. ಅವರು ಅರ್ಧ settlement ಗೆ ಹೇಳಿದರು.

ಶ್ರೀ ಕೆ.ಜಿ. ಬೋಪಯ್ಯ:– ಜಮಾಬಂದಿ ಇವರ ಹೆಸರಿನಲ್ಲಿದೆ. ಅವರು ಇಂಡಿಯಾದಲ್ಲಿ ಕುಳಿತುಕೊಂಡು ...

ಅಧ್ಯಕ್ಷರು:– ಅವರು ಕೇಳುವುದು ಇಷ್ಟೇ, ನಾವು ಬಿಟ್ಟುಕೊಡಲಿಕ್ಕೆ ತಯಾರಿದ್ದೇವೆ, ನಮಗೆ ದುಡ್ಡು ಕೊಟ್ಟು ವಹಿಸಿಕೊಳ್ಳಿ ಎಂದು ಹೇಳುತ್ತಾರೆ. ಅದೆಲ್ಲಾ details ಬೇಡ. ಅವರ ಪ್ರಶ್ನೆ ಇಷ್ಟೇನೆ. ಅವರನ್ನೆಲ್ಲಾ ಕರೆಸಿ ಚರ್ಚೆಯನ್ನಾದರೂ ಮಾಡಿ.

ಶ್ರೀ ಬಿ. ರಮಾನಾಥ ರೈ:– ಅದು ಅಷ್ಟು ಸರಳವಿಲ್ಲ.

ಅಧ್ಯಕ್ಷರು:– ಸುಮ್ಮನೆ ಕುಳಿತುಕೊಂಡು ನೀವು ಭತ್ತ ಕುಟ್ಟಿದ ಹಾಗೆ ಕುಟ್ಟುತ್ತಿರುವುದೇ? ಆಗುತ್ತದೋ ಇಲ್ಲವೋ? ಇಲ್ಲವೇ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ರಮಾನಾಥ ರೈ:– ಆಯಿತು.

ಅಧ್ಯಕ್ಷರು:– ಬಿ.ಬಿ. ನಿಂಗಯ್ಯ, ನಾಳೆ ಹಾಕಲಿಕ್ಕೆ ಹೇಳಿದ್ದಾರೆ, ಹೆಚ್.ಡಿ. ರೇವಣ್ಣ.

ಶ್ರೀ ಬಿ.ಬಿ. ನಿಂಗಯ್ಯ:– ನಾನು ಮೂರು ದಿವಸಗಳಿಂದ ಈ ಪ್ರಶ್ನೆಗೆ ಉತ್ತರ ಕೇಳುತ್ತಿದ್ದೇನೆ. ಅವರು ಇದಕ್ಕೆ ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಮೂರು ಪ್ರಶ್ನೆಗಳು ಬಂದರೂ ಸಹ ಇದೇ ಉತ್ತರವನ್ನು RDPR

ಇಲಾಖೆಯವರು ಹೇಳುತ್ತಿದ್ದಾರೆ. ಐದು ವರ್ಷಗಳಾದರೂ ಆ ಪ್ರಾಜೆಕ್ಟ್ ಮುಗಿದಿಲ್ಲ.

ಅಧ್ಯಕ್ಷರು:– ನಾಳೆ ಹಾಕೋಣ. ರೇವಣ್ಣನವರು ನಾಳೆ ಹಾಕೋಣ.

3) ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಾಚರಕನಹಳ್ಳಿ ಮತ್ತು ಕೋಡಿಹಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರುಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಕೆ.ಎಸ್. ಮಂಜುನಾಥಗೌಡ (ಮಾಲೂರು):– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಾಚರಕನಹಳ್ಳಿ ಮತ್ತು ಕೋಡಿಹಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರುಗಳಿಗೆ ತೊಂದರೆಯಾಗಿದೆ. ಈ ಕಾಮಗಾರಿಗೆ ಈಗಾಗಲೇ work order ಆಗಿದೆ, agreement period ಮುಗಿದಿದೆ. ಏಕೆ ಈ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಿದೆ ಎಂಬ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಟೆಂಡರ್ ಆಗಿದೆ. Amrutha Constructions Private Limited Company ಗೆ ಎರಡು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನಾವು ನೇಮಿಸಿದ್ದೇವೆ. ಬಂಡ್ ಅನ್ನು ಈ ವಾರದೊಳಗೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಆದಷ್ಟು ಬೇಗನೆ ಕಾಮಗಾರಿ ಪ್ರಾರಂಭಿಸುತ್ತೇವೆ.

ಶ್ರೀ ಕೆ.ಎಸ್. ಮಂಜುನಾಥಗೌಡ:– ಅಧ್ಯಕ್ಷರೆ, ಇಲ್ಲಿ ಸುಳ್ಳು ಹೇಳುತ್ತಿದ್ದಾರೆ. ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. Work period ಕೂಡ ಮುಗಿದುಹೋಗಿದೆ.

ಅಧ್ಯಕ್ಷರು:– ಒಂದು ನಿಮಿಷ ಕೇಳಿ, work order ಯಾವಾಗ ಕೊಟ್ಟಿದ್ದೀರಿ?